ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2041\2013\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:14/08/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯು:** ದೂರುದಾರರಾದ ಶ್ರೀಮತಿ.ಗಂಗಮ್ಮ ಕೋಂ ಲೇ.ಸಣ್ಣಪ್ಪ, ಮುತ್ಯಾಲಮ್ಮನ ಹಳ್ಳಿ, ಮಧುಗಿರಿ ತಾಲ್ಲೂಕ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ಮುತ್ಯಾಲಮ್ಮನ ಬೀದಿ ನಿವಾಸಿಯಾದ ಶ್ರೀಮತಿ.ಗಂಗಮ್ಮ ಕೋಂ ಲೇ.ಸಣ್ಣಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ತಹಶೀಲ್ದಾರ್ (ಇನ್ನು ಮುಂದೆ "ಎದುರುದಾರ" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ತಿರಿಯೋರು ಗ್ರಾಮದ ಸರ್ವೆ ನಂ.46/3ಪಿ ರಲ್ಲಿ 4 ಎಕರೆ 20 ಗುಂಟೆ ಜಮೀನಿನ ಫಡ ರಿಸ್ಟೋರ್ ಮಾಡುವ ಬಗ್ಗೆ ಎದುರುದಾರರಿಗೆ ಹಲವಾರು ಬಾರಿ ಅರ್ಜಿ ಸಲ್ಲಿಸಿದೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

4. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಎದುರುದಾರರು ಮತ್ತು ಮಧುಗಿರಿ ಉಪವಿಭಾಗಾಧಿಕಾರಿಗಳು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರನ್ನು ಕೇಳಲಾಗಿ, ಎದುರುದಾರರು ತಮ್ಮ ವರದಿಯಲ್ಲಿ –

ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ, ಸ್ಥಳ ಪರಿಶೀಲನೆ ಮಾಡಿ, ಫಡ ರಿಸ್ಟೋರ್ ಮಾಡಲು ಮಧುಗಿರಿ ಉಪವಿಭಾಗಾಧಿಕಾರಿಗಳಿಗೆ ಕಡತ ಮಂಡಿಸಿದೆಯೆಂದು ಹೇಳಿದ್ದಾರೆ.

5. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ –

ಸದರಿ ಜಮೀನಿಗೆ ಸಂಬಂಧಪಟ್ಟಂತೆ, ಆಕಾರ್ ಬಂದ್ ಪ್ರಕಾರ ಶ್ರೀ.ಸಣ್ಣಪ್ಪ ಬಿನ್ ಮುತ್ಯಾಲಪ್ಪ ರವರ ಹೆಸರಿನಲ್ಲಿದ್ದ ಸರ್ವೆ ನಂ.46/3ಪಿ ವಿಸ್ತೀರ್ಣ 4 ಎಕರೆ 25 ಗುಂಟೆ ಜಮೀನನ್ನು ಕಂದಾಯ ಬಾಕಿಗಾಗಿ ಫಡಕ್ಕೆ ದಾಖಲು ಮಾಡಲು ಎಂಆರ್ ಆದೇಶವಾಗಿದೆ. ಅದರಂತೆ, ಕೈಬರಹ ಪಹಣಿಯಲ್ಲೂ ಸಹ ನಮೂದಾಗಿದೆ. ಆ ನಂತರ, ಸದರಿ ಜಮೀನಿಗೆ ಸಂಬಂಧಪಟ್ಟ 46/1ಪಿ, 46/2ಪಿ, 46/3ಪಿ ಮತ್ತು 46/4ಪಿ ಎಂದು ನಮೂದಾಗಿದ್ದ ಪಹಣಿಗಳನ್ನು ಎಂಆರ್‌ಟಿ 20/14–15ರಂತೆ ಒಟ್ಟುಗೂಡಿಸಲಾಗಿದೆ. ಆದರೆ, ಸರ್ವೆ ನಂ.46/1 ಮತ್ತು 46/2 ಎಂದು ಪೋಡಾಗಿರುವುದು ಹಿಸ್ಸಾ ಟಿಪ್ಪಣಿಯಿಂದ ಕಂಡು ಬಂದಿದ್ದು, ಅದರಂತೆ ಪಹಣಿಗೆ ಇಂಡೀಕರಣವಾಗ ಬೇಕಾಗಿದೆ. ಸದರಿ ಸರ್ವೆ ನಂಬರ್ ಜಮೀನಿನ ಐಎಲ್ ಪ್ರಕಾರ ಪ್ರಾರಂಭದಲ್ಲಿ ಫಡ ಎಂದದು ಇದ್ದ ಜಮೀನು ನಂತರ, ಶ್ರೀ.ಕರೇತಿಮಯ್ಯ ಬಿನ್ ತಮ್ಮಣ್ಣ, ಶ್ರೀ.ಗಂಗಪ್ಪ ಬಿನ್ ನಂಜಪ್ಪ ಹಾಗೂ ಶ್ರೀ.ಮುತ್ಯಾಲಪ್ಪ ಬಿನ್ ರಾಯಣ್ಣ ರವರ ಹೆಸರುಗಳು ನಮೂದಾಗಿದೆ. ನಂತರ ಕೈಬರಹದ ಪಹಣಿಗಳ್ಳಲ್ಲಿ ಶ್ರೀ.ಸಣ್ಣಪ್ಪ ರವರಿಗೆ 4 ಎಕರೆ ಖಾತೆಯಾಗಿದ್ದು, ತೆರಿಯೂರು ಎಂಆರ್ ನಂ.18/78–79ರಂತೆ ಭೂ ಕಂದಾಯದ ಬಾಕಿಗಾಗಿ ಪಡಕ್ಕೆ ದಾಖಲಾಗಿದೆ. ಸದರಿ ಜಮೀನುಗಳಿಗೆ ಸಂಬಂಧಪಟ್ಟಂತೆ ತಪ್ಪಾಗಿ ನಮೂದಾದ ಎಲ್ಲಾ ಪೋಡುಗಳನ್ನು ರದ್ದುಪಡಿಸಿ, ಆಕಾರ್ ಬಂದ್ ಮತ್ತು ಹಿಸ್ಸಾ ಟಿಪ್ಪಣಿಯಂತೆ, ಹಾಲೀ ಅನುಭವದಲ್ಲಿರುವ ವ್ಯಕ್ತಿಗಳ ಮಾಹಿತಿಯನ್ನು ಸರ್ವೆಯರ್ ಮೂಲಕ ತಾಂತ್ರಿಕ ವರದಿ ಪಡೆದು ಖಚಿತಪಡಿಸಿಕೊಳ್ಳ ಬೇಕಾಗಿದೆ. ಆದರೆ, ದೂರುದಾರರ ಜಮೀನಿನ ಬಗ್ಗೆ ಸರ್ವೆಯರ್‌ರವರಿಂದ ಮಾಹಿತಿ ಪಡೆದಿದ್ದು, ಅದರಂತೆ ದೂರುದಾರರು ಸರ್ವೆ ನಂ.46/1ರಲ್ಲಿ 3 ಎಕರೆ 20 ಗುಂಟೆ ಪ್ರದೇಶದಲ್ಲಿ ಅನುಭವದಲ್ಲಿರುವುದು ಕಂಡು ಬಂದಿದೆ. ಆದರೆ, ದೂರುದಾರರ ಜಮೀನನ್ನು ಕಂದಾಯ ಬಾಕಿಗೆ ಫಡ ದಾಖಲಿಸುವ ಮುನ್ನ ಆರ್‌ಟಿಸಿ ಯಂತೆ 4 ಎಕರೆ 25 ಗುಂಟೆ ನಮೂದಾಗಿದ್ದು, ಉಳಿಕೆ ಜಮೀನನ್ನು ಯಾರಿಗೆ ನಮೂದಿಸ ಬೇಕೆಂಬ ಬಗ್ಗೆ? ಸಹ ಪರಿಶೀಲಿಸಬೇಕಿದೆ. ಈ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಖಾತೆದಾರರಾದ

Sd/-

ಶ್ರೀ.ಸಣ್ಣಪ್ಪ ಬಿನ್ ಮುತ್ಯಾಲಪ್ಪ ರವರಿಗೆ ಫಡ ರಿಸ್ಟೋರ್ ಮಾಡಲು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಪ್ರಸ್ತಾವನೆ ಮತ್ತು ಕಡತವನ್ನು ಸಲ್ಲಿಸಲಾಗಿದೆಯೆಂದು ಹೇಳಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸದರಿ ಸ್ವತ್ತು ಒಟ್ಟು 23.4 ಗುಂಟೆ ಜಮೀನಿದ್ದು, ಅದರಲ್ಲಿ 4 ಎಕರೆ 25 ಗುಂಟೆ ಜಮೀನು ಶ್ರೀ.ಸಣ್ಣಪ್ಪ ಬಿನ್ ಮುತ್ಯಾಲಪ್ಪ ರವರ ಹೆಸರಿನಲ್ಲಿದ್ದು, ಸದರಿ ಸರ್ವೆ ನಂಬರ್ ಜಮೀನನ್ನು ಭೂ ಕಂದಾಯ ಬಾಕಿಗಾಗಿ ಫಡಕ್ಕೆ ದಾಖಲು ಮಾಡಿ, ಎಂಆರ್ ಆದೇಶವಾಗಿದೆ. ದೂರುದಾರರು ಸಹ ಸದರಿ ಜಮೀನಿನಲ್ಲಿ ಹಕ್ಕು ಮತ್ತು ಹಿತಾಸಕ್ತಿ ಹೊಂದಿರುವುದು ಕಂಡು ಬಂದಿದೆ. ಸದರಿ ಜಮೀನಿಗೆ ಸಂಬಂಧಪಟ್ಟಂತೆ, ಕಂದಾಯ ಬಾಕಿಗಾಗಿ ಎಂಆರ್ 16/78–79ರಂತೆ ಭೂ ಕಂದಾಯದ ಬಾಕಿಗಾಗಿ ಫಡಕ್ಕೆ ದಾಖಲಾಗಿರುವುದು ಕಂಡು ಬಂದಿದೆ. ಸದರಿ ಜಮೀನುಗಳಿಗೆ ಸಂಬಂಧಪಟ್ಟಂತೆ, ಆಕಾರ್ ಬಂಧ್ ಮತ್ತು ಹಿಸ್ಸಾ ಟಿಪ್ಪಣಿಯಲ್ಲಿ ಹೊಂದಾಣಿಕೆಯಾಗದಿರುವುದರಿಂದ, ಸರ್ವೆಯರ್‌ವರಿಂದ ಪಡೆದ ತಾಂತ್ರಿಕ ವರದಿಯಲ್ಲಿ ದೂರುದಾರರ ಜಮೀನಿಗೆ ಸಂಬಂಧಪಟ್ಟ ವಿಸ್ತೀರ್ಣಕ್ಕೆ ವ್ಯತ್ಯಾಸ ಇರುವುದರಿಂದ, ಸದರಿ ಜಮೀನಿನ ಬಗ್ಗೆಗಿರುವ ದಾಖಲೆಗಳನ್ವಯ ಫಡ ರೆಸ್ಟೋರ್ ಮಾಡುವ ಅಧಿಕಾರ ತುಮಕೂರು ಜಿಲ್ಲಾಧಿಕಾರಿಗಳಿಗೆ ಇದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಎದುರುದಾರರು ಸಂಪೂರ್ಣ ಕಡತವನ್ನು ಮಧುಗಿರಿ ಉಪವಿಭಾಗಾಧಿಕಾರಿಗಳಿಗೆ ಮಂಡಿಸಿದ್ದು, ಸದರಿಯವರು ಪುನಃ ಸದರಿ ಕಡತವನ್ನು ತುಮಕೂರು ಜಿಲ್ಲಾಧಿಕಾರಿಗಳಿಗೆ ಮಂಡಿಸಿರುವುದು ಕಂಡು ಬಂದಿದೆ.

7. ಆದ್ದರಿಂದ, ದೂರುದಾರರ ಜಮೀನಿಗೆ ಸಂಬಂಧಪಟ್ಟಂತೆ ಕಾನೂನು ರೀತಿ ಕ್ರಮ ಜರುಗಿಸಿ ಫಡ ಆದೇಶವನ್ನು ತೆರವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 14/8/17

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.